

**ಶ್ರೀದೇವಿ ಕಳಸದ**

ಕಲೆ: ಪ್ರವೀಣ್ ಆಚಾರ್ಯ

# ಶಾಕಾಂಬರಿ ಮಹಾತ್ಮೆ

ಗಾಂಧೀ ಬಝಾರಿನ ಫುಟ್‌ಪಾತ್ ಮೇಲೆ ನೆರಳನ್ನೇ ಹುಡುಕಿ ಝಿಗ್ ಝ್ಯಾಗ್‌ನಂತೆ ನಡೆಯುತ್ತಿದ್ದಾಗ ಇತ್ತ ಕಟ್ಟಿರುವೆಯೂ ಅಲ್ಲದ, ಚೇಳೂ ಅಲ್ಲದ ಏನೋ ಒಂದು ಸೊಂಟಕ್ಕೆ ಕಟ್ಟನೆ ಕಡಿದಂತಾಗಿ ಜೀವ ಹೋದಂತಾಯಿತು. ಸಟಕ್ಕನೆ ತಿರುಗಿದೆ. ಕೊನೇ ಎರಡೆರಡು ಹಲ್ಲುಗಳು ಬಾಕಿ ಉಳಿದಿದ್ದವು ಆ ಪರಿ ನಗುತ್ತಿದ್ದಳು ಮೀನುಗಣ್ಣಿನ ಶಾಕಾಂಬರಿ ಮಮದಾಪೂರ. ಒಂಬತ್ತು ವರ್ಷಗಳ ಮೇಲೆ ಆಕೆಯನ್ನು ಹೀಗಿಲ್ಲಿ ನೋಡಿ ಎದೆ ಧಸಕ್ಕೆಂದಿತಾದರೂ ಸಾವರಿಸಿಕೊಂಡು, 'ಹೆಂಗದಿ ಶಾಕ್, ಇಲ್ಲೇನು?' ಅಂದೆ. ಹಳೇಚಾಳಿಯನ್ನು ಮುಂದುವರಿಸಿ ನನ್ನೆರಡೂ ಕೆನ್ನೆಗಳು ಉರಿಯುವಂತೆ ಹಿಂಡಿಬಿಟ್ಟಳು; ಅಳೆದ ಮಾಲೆಯನ್ನು ಕತ್ತರಿಸಲೆಂದು ಬ್ಲೇಡು ಕೈಗೆತ್ತಿಕೊಂಡ ಹೂವಾಡಗಿತ್ತಿ, ಟೆಡ್ಡಿಯ ಕಿವಿ ಹಿಂಡುತ್ತಿದ್ದ ಪುಟ್ಟಿ, ಆಕಾಶಕ್ಕೆ ಛತ್ರಿ ಏರಿಸಿ ಇಳಿಸಿ ಮಾಡುತ್ತಿದ್ದವ, ವ್ಯಾನಿಟಿ ಬ್ಯಾಗಿನ ಝಿಪ್ ಚೆಕ್ ಮಾಡುತ್ತಿದ್ದವ, ರಂಗೋಲಿಪುಡಿಯ ಜಿನುಗುತನವನ್ನು ಅಳೆಯುತ್ತಿದ್ದ ದಡೂತಿ ಹೆಣ್ಣುಮಗಳು, ಏನೇನೋ ಗುಂಗಲ್ಲಿ ಓಡಾಡಿಕೊಂಡಿದ್ದ ಫುಟ್‌ಪಾತಿಗರು ಕ್ಷಣ ಹೊರಳಿ ನೋಡಿದರು. ಅಯ್ಯೋ ನಾನು ಅಷ್ಟು ಜೋರು ಚೀರಿಬಿಟ್ಟೆನೆ?! ಒಂಥರಾ ಅನ್ನಿಸಿತು. ಶಾಕಾಂಬರಿ ಮಾತ್ರ ರಾಜ್ಯ ಗೆದ್ದುಕೊಂಡು ಬಂದಂತೆ ವಿಚಿತ್ರ ಖುಷಿ ಅನುಭವಿಸುತ್ತಿದ್ದಳು.

'ನಂಬರ್‌ಕೊಡ್ ನಂಬರ್‌ಕೊಡ್ ನಂಬರ್‌ಕೊಡ್' ಒಂದೇ ಸಮ ತೋಳನ್ನು ಪಟಪಟನೆ ಬಡಿದಳು. ನನಗೂ ಸ್ವಲ್ಪ ತಲೆ ಓಡಿಸಲು ಬರುವಂತಿದ್ದರೆ, ಒಂದು ಸಂಖ್ಯೆ ತಪ್ಪು ಹೇಳಿ ದಾಟಿಕೊಳ್ಳಬಹುದಿತ್ತು. ಆದರೆ ನನ್ನೆದುರೇ ನನ್ನ ನಂಬರನ್ನು 'ಹಳೇಗಿಳಿ' ಎಂದು ಸೇವ್